# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1017
2. ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 27.12.2022
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ವಾಣಿ ವಿಲಾಸ ಸಕ್ಕರೆ ಕಾರ್ಖಾನೆಯನ್ನು ಪುನ: ಪ್ರಾರಂಭಿಸಲು ಹಾಗೂ ಕಾರ್ಖಾನೆಯ ಕಾರ್ಮಿಕರಿಗೆ ಸಂಬಳದ ಪಾವತಿಯ ಬಗ್ಗೆ ಸರ್ಕಾರದ ನಿಲುವೇನು? (ವಿವರ ನೀಡುವುದು) | ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ., ಹಿರಿಯೂರು, ಚಿತ್ರದುರ್ಗ ಜಿಲ್ಲೆ – ಈ ಕಾರ್ಖಾನೆಯಲ್ಲಿ 2003-04ನೇ ಹಂಗಾಮಿನಿಂದ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿದ್ದು, ಸಕ್ಕರೆ ನಿರ್ದೇಶನಾಲದ ಆದೇಶ ಸಂಖ್ಯೆ: ಡಿಎಸ್‌ಕೆ:ಇಎಸ್‌ಜಿಎಸ್:76/2003-04, ದಿನಾಂಕ: 01.09.2004 ರನ್ವಯ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ., ಹಿರಿಯೂರು, ಚಿತ್ರದುರ್ಗ ಜಿಲ್ಲೆ – ಈ ಕಾರ್ಖಾನೆಯು ಪ್ರಸ್ತುತ ಸಮಾಪನೆಯಲ್ಲಿರುತ್ತದೆ.<br><br>ಈ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವುದರ ಮೂಲಕ ಪುನಶ್ಚೇತನಗೊಳಿಸಲು 2007ನೇ ಸಾಲಿನಲ್ಲಿ ಹಲವಾರು ಬಾರಿ ಟೆಂಡರ್ ಪ್ರಕಟಣೆಯನ್ನು ನೀಡಲಾಗಿರುತ್ತದೆ. ಆದರೆ, ಸದರಿ ಟೆಂಡರ್ ಪ್ರಕ್ರಿಯೆಗಳಲ್ಲಿ ಯಾವುದೇ ಬಿಡ್ಡುದಾರರು ಭಾಗವಹಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಪ್ರಯತ್ನ ಯಶಸ್ವಿಯಾಗಿರುವುದಿಲ್ಲ.<br><br>ಈ ಕಾರ್ಖಾನೆಯ ಕಬ್ಬು ಮೀಸಲು ಕ್ಷೇತ್ರವು ಹಿರಿಯೂರು, ಚಳ್ಳಕೆರೆ ತಾಲ್ಲೂಕುಗಳು, ಹೊಸದುರ್ಗ ತಾಲ್ಲೂಕಿನ ಮತ್ತೋಡು ಮತ್ತು ಮಾಡದಕೆರೆ ಹೋಬಳಿಗಳು, ಚಿತ್ರದುರ್ಗ ತಾಲ್ಲೂಕಿನ ಹಿರೆಗುಂಟನೂರು, ಭರಮಸಾಗರ, ಕಸಬ ಹೋಬಳಿ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ |

| | | |
|---|---|---|
| | | ತಾಲ್ಲೂಕಿನ ಹುಳಿಯಾರು, ಕಂದಿಕೆರೆ ಹೋಬಳಿಗಳು ಮತ್ತು ಶಿರಾ ತಾಲ್ಲೂಕಿನ ಪೂರ್ಣ ಭಾಗ ಒಳಪಟ್ಟಿರುತ್ತದೆ. ಸದರಿ ಮೀಸಲು ಕ್ಷೇತ್ರದಲ್ಲಿ ನೀರಾವರಿಯ ಸೌಲಭ್ಯದ ಕೊರತೆ ಇರುತ್ತದೆ.<br><br>ಈ ಕಾರ್ಖಾನೆಯು ಸ್ಥಗಿತಗೊಂಡು 18 ವರ್ಷಗಳಾಗಿದ್ದು, ಈ ಕಾರ್ಖಾನೆಯ ಯಂತ್ರೋಪಕರಣಗಳು ಸಂಪೂರ್ಣವಾಗಿ ಹಾಳಾಗಿರುತ್ತವೆ. ಪ್ರಸ್ತುತ ಸದರಿ ಕಾರ್ಖಾನೆಯನ್ನು ಪುನರ್ ಆರಂಭಿಸಲು ಕೋರಿ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳಿಂದ ಮನವಿಗಳು ಸ್ವೀಕೃತವಾಗಿದ್ದು, ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸರ್ಕಾರಕ್ಕೆ ವರದಿ / ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತಿಳಿಸಲಾಗಿರುತ್ತದೆ. ವರದಿ / ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ.<br><br>ಈ ಕಾರ್ಖಾನೆಯ ಸೇವೆಯಲ್ಲಿದ್ದ ಎಲ್ಲಾ ಖಾಯಂ ಮತ್ತು ಸುಗ್ಗಿ ಕಾಯಂ ನೌಕರರನ್ನು ದಿನಾಂಕ:30.10.2004ರ ಅಪರಾಹ್ನ ಕಾರ್ಖಾನೆಯ ಸೇವೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ. ಕಾರ್ಖಾನೆಯ ಕಾರ್ಮಿಕರಿಗೆ ಯಾವುದೇ ಸಂಬಳದ ಬಾಕಿ ಇರುವುದಿಲ್ಲ. |

ಸಂಖ್ಯೆ: ಸಿಐ 137 ಸಿಓಎಫ್ 2022

(ಶಂಕರ.ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು